ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಫೆಬ್ರವರಿ 3.

**ಪಾಠ 5** **ಜನವರಿ 27–ಫೆಬ್ರವರಿ 2**

## ಏದೇನಿನ ನಂತರದ ಪಾರುಪತ್ಯಗಾರಿಕೆ

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ: ಯೆಶಾಯ 22:14–18; 1 ಕೊರಿಂಥ 4:1,2; ಕೊಲೊಸ್ಸೆ 2:2,3; ಎಫೆಸ 6:13–17; 2 ಕೊರಿಂಥ 5:10.

**ಸ್ಮರಣವಾಕ್ಯ:'ದೇವರು ನಮ್ಮನ್ನು ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತನಾಡುತ್ತೇವೆ.' (1 ಥೆಸಲೋನಿಕ 2:4)**

ಅದಾಮ ಮತ್ತು ಹವ್ವಳ ಮೊದಲ ಕೆಲಸವೂ ಪಾರುಪತ್ಯಗಾರಿಕೆಯನ್ನು ಒಳಗೊಂಡಿತ್ತು.ತೋಟ ಮತ್ತು ಇಡೀ ಸೃಷ್ಟಿಯನ್ನು ಅವರು ನೋಡಿಕೊಂಡು, ಅನುಭವಿಸುತ್ತಾ ಮತ್ತು ಅದರ ಮೇಲೆ ಅಧಿಕಾರವನ್ನು ಹೊಂದುವುದಕ್ಕಾಗಿ ಅವರಿಗೆ ನೀಡಲಾಯಿತು (ಆದಿಕಾಂಡ 2:15), ಅವರು ಅದಾವುದನ್ನು ತಮ್ಮ ಸ್ವಂತದ್ದು ಎಂದು ಭಾವಿಸದೆ ಇದ್ದರೂ ಕೂಡ ಪಾರುಪತ್ಯಗಾರರಾಗಿ ಅವರ ಅಧೀನಕ್ಕೆ ಅದನ್ನು ಒಪ್ಪಿಸಲಾಗಿತ್ತು.

ಈ ವಾರ ಪಾಪದ ಪ್ರವೇಶದ ನಂತರ ಅಂದರೆ ನಮ್ಮ ಮೊದಲ ತಂದೆತಾಯಿಯರು ಏದೆನ್ ತೋಟದಿಂದ ಹೊರ ಹಾಕಲ್ಪಟ್ಟ ನಂತರ ಪಾರುಪತ್ಯಗಾರಿಕೆಯ ಅರ್ಥವನ್ನು ಬಹಳ ಸೂಕ್ಷ್ಮವಾಗಿ ಗಮನಿಸೋಣ. ನಾವು ಕೂಡ ಪಾರುಪತ್ಯಗಾರರಾಗಿದ್ದೇವೆ, ಆದರೆ ನಾವು ಅದಾಮ ಮತ್ತು ಹವ್ವಳು ಜೀವಿಸಿದ ವಾತಾವರಣಕ್ಕಿಂತ ಭಿನ್ನವಾದ ಪರಿಸರದಲ್ಲಿ ಪಾರುಪತ್ಯಗಾರರಾಗಿದ್ದೇವೆ.

ಪಾರುಪತ್ಯಗಾರಿಕೆ ಎಂದರೆ ಏನು? ಸತ್ಯವೇದದ ಕೆಲವು ವ್ಯಕ್ತಿಗಳು ಪಾರುಪತ್ಯಗಾರಿಕೆ ಎಂದರೆ ಏನು ಮತ್ತು ಅವರು ಹೇಗೆ ಜೀವಿಸಿದರು ಎಂಬುದನ್ನು ತೋರಿಸುತ್ತಾರೆ. ಸತ್ಯವೇದದ ಬೇರೆ ಭಾಗಗಳು ಇದನ್ನು ಬಹಳ ಸ್ಪಷ್ಟವಾಗಿ ವಿವರಿಸುತ್ತವೆ. ನಾವು ದೇವರ ಪಾರುಪತ್ಯಗಾರರಾದಾಗ, ನಮ್ಮ ದೃಷ್ಟಿಯು ಲೋಕದ ಮತ್ತು ಅದರ

ವಸ್ತುಗಳ ಮೇಲಿನ ವ್ಯಾಮೋಹದಿಂದ ದೂರವಾಗಿ ಸೃಷ್ಟಿಕರ್ತನು ಮತ್ತು ಆತನ ಕೆಲಸದ ಮೇಲೆ ಇರುತ್ತದೆ. ಆದಾಮ ಮತ್ತು ಹವ್ವಳ ಹಾಗೆ ದೇವರು ನಮಗೆ ದೈವಿಕವಾದ ಜವಬ್ದಾರಿಗಳನ್ನು ವಹಿಸಿದ್ದಾನೆ. ಎದೆನನಲ್ಲಿ ಪಾಪದ ಪ್ರವೇಶದ ನಂತರ, ಪಾರುಪತ್ಯಗಾರಿಕೆಯ ಕೆಲಸ ಬದಲಾಗಿದೆ, ಯಾಕೆಂದರೆ ಭೌತಿಕವಾದ ಲೋಕವನ್ನು ಕಾಪಾಡುವುದರ ಜೊತೆಗೆ ಆಧ್ಯಾತ್ಮಿಕ ಸತ್ಯಾಂಶಗಳ ಕಾಪಾಡುವ ಜವಾಬ್ದಾರಿಯನ್ನು ಕೂಡ ವಹಿಸಲಾಗಿದೆ.

## ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ ಜನವರಿ 27–ಫೆಬ್ರವರಿ 2

**ಭಾನುವಾರ ಜನವರಿ 28**

### ಹಳೆ ಒಡಂಬಡಿಕೆಯಲ್ಲಿ ಪಾರುಪತ್ಯಗಾರರು

‘ಪಾರುಪತ್ಯಗಾರಿಕೆ’ಎಂಬ ಪದವನ್ನು ಹಳೆ ಒಡಂಬಡಿಕೆಯಲ್ಲಿ ಕೆಲವು ಬಾರಿ ಮಾತ್ರ ಭಾಷಾಂತರಿಸಲಾಗಿದೆ. ಅನೇಕ ಬಾರಿ ಇದರ ಮೂಲ ಅರ್ಥವಾದ ‘ಮನೆಯ ಮೇಲ್ವಿಚಾರಕ’ ಇದರ ಅರ್ಥ ಮನೆಯನ್ನು ನಿರ್ವಹಿಸುವವನು ಅಂದರೆ ‘ಪಾರುಪತ್ಯಗಾರನು’ ಎಂದು ಅರ್ಥ (ಆದಿಕಾಂಡ 43:19; 44:1,4; 1 ಅರಸರು 16:9). ಪಾರುಪತ್ಯಗಾರರು ಮನೆಯನ್ನು ನಿರ್ವಹಣೆ ಮಾಡುತ್ತಾ ಅವರ ಯಜಮಾನರ ಅಸ್ತಿಯನ್ನು ನೋಡಿಕೊಂಡು ಅವರಿಗೆ ನೀಡಲಾಗಿರುವ ಎಲ್ಲಾ ಕೆಲಸಗಳನ್ನು ನಿಭಾಯಿಸುತ್ತಿದ್ದರು. ಪಾರುಪತ್ಯಗಾರಿಕೆಯ ಅರ್ಥವನ್ನು ಹುಡುಕುವುದೆಂದರೆ ಪಾರುಪತ್ಯಗಾರ ಗುಣಲಕ್ಷಣಗಳನ್ನು ಹುಡುಕುವುದರಿಂದ ಅರ್ಥ ಮಾಡಿಕೊಳ್ಳಬಹುದು. ಪಾರುಪತ್ಯಗಾರರನ್ನು ಪಾರುಪತ್ಯಗಾರಿಕೆಯಿಂದ ಬೇರೆ ಮಾಡಲು ಸಾಧ್ಯವಿಲ್ಲ, ಯಾಕೆಂದರೆ ಅದು ಅವರ ಸ್ವಭಾವವನ್ನು ತೋರಿಸುತ್ತದೆ.

ಪಾರುಪತ್ಯಗಾರಿಕೆಯ ಕೆಲವು ಲಕ್ಷಣಗಳನ್ನು ಹಳೆಯ ಒಡಂಬಡಿಕೆಯಲ್ಲಿ ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಮೊದಲನೇಯದಾಗಿ, ಪಾರುಪತ್ಯಗಾರನ ಸ್ಥಾನವು ದೊಡ್ಡ ಜವಾಬ್ದಾರಿಯನ್ನು ಹೊಂದಿದೆ (ಆದಿಕಾಂಡ 39:4). ಪಾರುಪತ್ಯಗಾರರು ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಆಯ್ಕೆಯಾಗುತ್ತಿದ್ದರು, ಮತ್ತು ಕೆಲಸಗಳನ್ನು ಪೂರ್ಣಗೊಳಿಸುವುದರಿಂದ ಅವರ ಯಜಮಾನರ ನಂಬಿಕೆ ಮತ್ತು ಗೌರವಕ್ಕೆ



ಪಾತ್ರರಾಗುತ್ತಿದ್ದರು. ಎರಡನೇಯದಾಗಿ, ಅವರಿಗೆ ವಹಿಸಲಾಗಿರುವ ಎಲ್ಲವೂ ಕೂಡ ತಮ್ಮ ಯಜಮಾನರಿಗೆ ಸೇರಿದ್ದು ಎಂದು ಪಾರುಪತ್ಯಗಾರರಿಗೆ ಗೊತ್ತಿತ್ತು. (ಆದಿಕಾಂಡ 24:34–38). ಇದು ಯಜಮಾನ ಮತ್ತು ಪಾರುಪತ್ಯಗಾರನ ನಡುವೆ ಇದ್ದ ವಿಶೇಷವಾದ ವ್ಯತ್ಯಾಸವಾಗಿತ್ತು. ಪಾರುಪತ್ಯಗಾರರು ತಮ್ಮ ಸ್ಥಾನವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಮೂರನೇಯದಾಗಿ, ಪಾರುಪತ್ಯಗಾರರು ತಮಗೆ ವಹಿಸಲಾಗಿದ್ದ ವಸ್ತುಗಳನ್ನು ತಮ್ಮ ಉಪಯೋಗಕ್ಕೆ ತೆಗೆದುಕೊಂಡಾಗ ಯಜಮಾನರ ಮತ್ತು ತಮ್ಮ ನಡುವಿನ ನಂಬಿಕೆಯು ಮುರಿದುಹೊಗುತ್ತಿತ್ತು ಮತ್ತು ಅವರನ್ನು ಆ ಸ್ಥಾನದಿಂದ ತೆಗೆದುಹಾಕಲಾಗುತ್ತಿತ್ತು. (ಆದಿಕಾಂಡ 3:23, ಹೋಶೇಯ 6:7).

ಯೆಶಾಯ 22:14–18. ಹಿಜ್ಕಿಯನ ಕಾಲದಲ್ಲಿ ಶೆಬ್ನನು ಪಾರುಪತ್ಯಗಾರನಾಗಿ, ಮತ್ತು ಖಜಾಂಚಿಯಾಗಿ ನಿಯಮಿಸಲ್ಪಟ್ಟನು ಈ ಎರಡೂ ಸ್ಥಾನಗಳು ಅಧಿಕಾರದಿಂದ ಹೊಂದಿದ ಸ್ಥಾನಗಳಾಗಿದ್ದವು. ಅವನು ಆ ಸ್ಥಾನವನ್ನು ದುರುಪಯೋಗಪಡಿಸಿಕೊಂಡುದರ ಪರಿಣಾಮ ಏನಾಯಿತು?

---

---

‘ಪಾರುಪತ್ಯಗಾರನು ತನ್ನ ಯಜಮಾನ ಜೊತೆಗೆ ಗುರುತಿಸಿಕೊಳ್ಳುತ್ತಾನೆ. ಪಾರುಪತ್ಯಗಾರನ ಸ್ಥಾನವನ್ನು ಅಂಗಿಕರಿಸಿದಾಗ ಅವನು ಯಜಮಾನನಗೆ ಬದಲಾಗಿ ಕೆಲಸ ಮಾಡುತ್ತಾನೆ,ಅವನ ಯಜಮಾನನು ಹೇಗೆ ಕಾರ್ಯನಿರ್ವಹಿಸುತ್ತಾನೋ ಹಾಗೆ ಅವನು ಕಾರ್ಯನಿರ್ವಹಿಸಬೇಕಾಗುತ್ತದೆ. ಯಜಮಾನನ ಆಸಕ್ತಿಯು ಅವನ ಅಸಕ್ತಿಯಾಗುತ್ತದೆ. ಪಾರುಪತ್ಯಗಾರನ ಸ್ಥಾನವು ಯಜಮಾನನು ಅವನಗೆ ವಹಿಸಿದ ಗೌರವವಾದ ಸ್ಥಾನವಾಗಿದೆ. ಅವನಗೆ ವಹಿಸಲಾಗಿರುವ ಯಾವುದೇ ಆಸ್ತಿಯನ್ನು ತನ್ನ ಸ್ವಂತಕ್ಕೆ ಅವನು ಉಪಯೋಗಿಸಿದರೆ ಅವನ ಮೇಲೆ ಇರಿಸಲಾಗಿರುವ ನಂಬಿಕೆಗೆ ದ್ರೋಹ ಮಾಡಿದಂತೆ ಆಗುತ್ತದೆ.’ **ಎಲೆನ್ ಜಿ ವೈಟ್ ಟೆಸ್ಟಿಮೊನಸ್ ಫಾರ್ ದಿ ಚರ್ಚ್ ಸಂಪುಟ 9. ಪುಟ 246.**

ಈ ಜೀವನದಲ್ಲಿ ನಮಗೆ ವಹಿಸಲಾಗಿರುವ ಎಲ್ಲಾ ವಿಷಯಗಳಲ್ಲಿ ನಾವು

ಪಾರುಪತ್ಯಗಾರರಾಗಿದ್ದೇವೆ ಎಂಬುದನ್ನು ನಾವು ಇನ್ನೂ ಚೆನ್ನಾಗಿ ಹೇಗೆ ಅರ್ಥ ಮಾಡಿಕೊಳ್ಳಬಹುದು. ಈ ಗ್ರಹಿಕೆಯು ನಾವು ಮಾಡುವ ಎಲ್ಲಾ ಕೆಲಸಗಳಲ್ಲಿ ಯಾವ ವ್ಯತ್ಯಾಸವನ್ನು ತೋರಿಸುತ್ತದೆ.

**ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ ಸೋಮವಾರ**
**ಜನವರಿ 27–ಫೆಬ್ರವರಿ 2**

**ಹೊಸ ಒಡಂಬಡಿಕೆಯಲ್ಲಿ ಪಾರುಪತ್ಯಗಾರರು ಜನವರಿ 29**

**‘ಪಾರುಪತ್ಯಗಾರ’** ಎನ್ನುವುದಕ್ಕೆ ಮೂಲ ಗ್ರೀಕ್ ಭಾಷೆಯಲ್ಲಿ ಎರಡು ಪದಗಳನ್ನು ಉಪಯೋಗಿಸಲಾಗಿದೆ. **‘ಎಪಿಟ್ರೋಪೊಸ್’** ಇದನ್ನು ಮೂರು ಬಾರಿ ಉಪಯೋಗಿಸಲಾಗಿದೆ, ಮತ್ತು **‘ಒಇಕೊನೊಮೊಸ್’,** ಈ ಪದ 10 ಬಾರಿ ಬಳಕೆಯಾಗಿದೆ. ಈ ಎರಡೂ ಪದಗಳು ಕೂಡ ಯಜಮಾನನು ತನ್ನ ಪಾರುಪತ್ಯಗಾರಿನಿಗೆ ವಹಿಸುವ ಜವಾಬ್ದಾರಿಯನ್ನು ತೋರಿಸುತ್ತವೆ.

ಹಳೆ ಮತ್ತು ಹೊಸ ಒಡಂಬಡಿಕೆ ಎರಡರಲ್ಲೂ ಕೂಡ ಪಾರುಪತ್ಯಗಾರರು ತಾವು ಮಾಡುವ ಕೆಲಸದಿಂದ ಗುರುತಿಸಲ್ಪಡುತ್ತಾರೆ. ವಿಶೇಷವಾಗಿ ಹೊಸ ಒಡಂಬಡಿಕೆಯು ಪಾರುಪತ್ಯಗಾರರನ್ನು ಅವರ ಹೊಣೆಗಾರಿಕೆ (ಲೂಕ 12:48), ಮತ್ತು ಅವರ ನರೀಕ್ಷಣೆಗಳ (1 ಕೊರಿಂಥ 4:2) ಮೂಲಕ ಅವರನ್ನು ವರ್ಣಿಸುತ್ತದೆ. ಹಳೆಯ ಒಡಂಬಡಿಕೆಯು ದೇವರ ಯಜಮಾನಿಕೆಯ ಕುರಿತಾಗಿ ಹೆಚ್ಚಾಗಿ ಹೇಳಿದರೂ ಕೂಡ ಎರಡೂ ಒಡಂಬಡಿಕೆಯಲ್ಲಿ ಒಂದೇ ಅರ್ಥವನ್ನು ನೀಡಿದರೂ ಕೂಡ, ಹೊಸ ಒಡಂಬಡಿಕೆಯಲ್ಲಿ ವಸ್ತುಗಳ ಮೇಲಿನ ಪಾರುಪತ್ಯಗಾರಿಕೆಗಿಂತ ಮಿಗಿಲಾದ ವಿಷಯಗಳನ್ನು ವಿವರಿಸುತ್ತದೆ.

ಅಪ್ರಾಮಾಣಿಕನಾದ ಪಾರುಪತ್ಯಗಾರನ ಸಾಮ್ಯದಲ್ಲಿ (ಲೂಕ 16:1–15) ಯೇಸುವು ಪಾರುಪತ್ಯಗಾರನ ಅರ್ಥವನ್ನು ಇನ್ನೂ ಹೆಚ್ಚಾಗಿ ವಿವರಿಸುತ್ತಾರೆ. ಪಾರುಪತ್ಯಗಾರನು ಹಣಕಾಸಿನ ದುರಂತವನ್ನು ತಡೆಯುವುದಕ್ಕಿಂತ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿದ್ದಾನೆ ಎಂದು ತಿಳಿಸುತ್ತಾರೆ. ಅದು ನಂಬಿಕೆಯ ಮೂಲಕ ಆತ್ಮೀಯ ದುರಂತಗಳನ್ನು ತಪ್ಪಿಸಿಕೊಳ್ಳುವುದು ಹೇಗೆ ಎಂದು ವಿವರಿಸುತ್ತದೆ. ಒಬ್ಬ ಬುದ್ಧಿವಂತ



ಪಾರುಪತ್ಯಗಾರನು ಭವಿಷ್ಯಕ್ಕೊಸ್ಕರ ಸಿದ್ದತೆ ಮಾಡಿಕೊಳ್ಳುವಾಗ ಕ್ರಿಸ್ತನ ಬರೋಣಕ್ಕೆ ಸಿದ್ದತೆ ಮಾಡಿಕೊಳ್ಳುತ್ತಾನೆ. (ಮತ್ತಾಯ 25:21)

1 ಕೊರಿಂಥ 4:1, 2 ತೀತನಗೆ 1:7, ಮತ್ತು 1 ಪೇತ್ರನು 4:10 ನ್ನು ಓದಿರಿ. ಈ ವಚನಗಳು ಪಾರುಪತ್ಯಗಾರ ಮತ್ತು ಪಾರುಪತ್ಯಗಾರಿಕೆಯ ಕುರಿತಾಗಿ ಏನು ಹೇಳುತ್ತವೆ?

______________________________

______________________________

‘ದೇವರು ನಂಬಿಕೆಯಲ್ಲಿ ನನಗೆ ನೀಡಲಾಗಿರುವ ಎಲ್ಲಾ ಶಕ್ತಿಯು ಮತ್ತು ಅಂಗಾಂಗಗಳು ಎಚ್ಚರಿಸಲ್ಪಡುವ ಹಾಗೆ ನಾನು ನನ್ನ ಹೃದಯವನ್ನು ಪರಿಶುದ್ಧಾತ್ಮನಗಾಗಿ ತೆರೆಯಲೋ? ನಾನು ಕ್ರಿಸ್ತನ ಅಸ್ತಿಯಾಗಿದ್ದೇನೆ, ಮತ್ತು ಆತನ ಸೇವೆಗಾಗಿ ನಿಯಮಿತನಾಗಿದ್ದೇನೆ. ನಾನು ಆತನ ಕೃಪೆಯ ಪಾರುಪತ್ಯಗಾರನಾಗಿದ್ದೇನೆ.’ **ಎಲೆನ್ ಜಿ ವೈಟ್ ಫಂಡಮೆಂಟಲ್ ಆಫ್ ಕ್ರಿಸ್ಟಿಯನ್ ಎಜುಕೇಶನ್, ಪುಟ 30**.

ಲೂಕ 12:35–48,ರಲ್ಲಿ ‘ಪಾರುಪತ್ಯಗಾರ’ ಎಂಬ ಪದವನ್ನು ರೂಪಕವಾಗಿ ಯೇಸು ಉಪಯೋಗಿಸಿದ್ದಾರೆ. ಬುದ್ದಿವಂತ ಪಾರುಪತ್ಯಗಾರನು ಮನುಷ್ಯ ಕುಮಾರನ ಬರುವಿಕೆಗಾಗಿ ಸಿದ್ದನಾಗಿರುವುದಾಗಿ ಆತನು ಹೇಳುತ್ತಾನೆ, ಮತ್ತು ಅಪ್ರಾಮಾಣಿಕನಾದ ಪಾರುಪತ್ಯಗಾರನು ತನ್ನ ಯಜಮಾನನು ಬರುವುದು ತಡವಾದಾಗ ತನ್ನ ಜವಬ್ದಾರಿಯನ್ನು ಬಿಟ್ಟುಕೊಡುತ್ತಾನೆ. ಅಪ್ರಾಮಾಣಿಕನಾದ ಪಾರುಪತ್ಯಗಾರನು ಕ್ರೂರಿಯಾಗಿ ತನ್ನ ಸುತ್ತಲೂ ಇರುವವರನ್ನು ದುರುಪಯೋಗ ಪಡಿಸಿಕೊಳ್ಳುವನು. ಅವನು ಒಳ್ಳೆಯ ಕೆಲಸದ ಮತ್ತು ಕೃಪೆಯ ನಿರ್ವಾಹಕನ ಮಾದರಿಯಲ್ಲ.

ಲೂಕ 12:45 ನ್ನು ಓದಿರಿ, ಸೇವೆಂತ್–ಡೇ ಅಡ್ವೆಂಟಿಸ್ಟ್ ರಾಗಿ ನಾವು ಯಾಕೆ ಯಾವಾಗಲೂ ಕೂಡ “ವಿಳಂಬ”ದ ಕುರಿತಾಗಿ ಹೆಚ್ಚು ಚಿಂತಿಸುತ್ತೇವೆ, ಮತ್ತು ಈ ಬಲೆಗೆ ಯಾವಾಗಲೂ ಬೀಳುತ್ತೇವೆ.?

**ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ ಮಂಗಳವಾರ**

**ಜನವರಿ 27–ಫೆಬ್ರವರಿ 2**

## ದೇವರ ರಹಸ್ಯಗಳ ಪಾರುಪತ್ಯಗಾರರು ಜನವರಿ 30

ಕೊಲೋಸ್ಸೆ 2:2,3 ಮತ್ತು 1 ತಿಮೋಥಿ 3:16 ನ್ನು ಓದಿರಿ ಈ ವಚನಗಳು 'ರಹಸ್ಯ' ವನ್ನು ಹೇಗೆ ಗುರುತಿಸುತ್ತವೆ. 'ರಹಸ್ಯ'ವಾದವುಗಳು ಎಂಬ ಈ ವಿಷಯಗಳು ಅವುಗಳ ಕುರಿತಾಗಿ ನಾವು ಎಷ್ಟರ ಮಟ್ಟಿಗೆ ತಿಳಿದುಕೊಳ್ಳಬಹುದು ಎಂದು ತಿಳಿಸುತ್ತವೆ.?

ನಾಮಥ್ಯನಾದ ಚೋಫರನು 'ದೇವರ ಅಗಾಧಗಳನ್ನು ಕಂಡುಕೊಳ್ಳ ಬಲ್ಲಿಯಾ?' ಎಂದು ಕೇಳುತ್ತಾನೆ. (ಯೋಬನು 11:7) 'ರಹಸ್ಯ' ಎಂಬ ಪದದ ಅರ್ಥವನ್ನು ಗೊಂದಲ, ಅಸ್ಪಷ್ಟ, ಅಜ್ಞಾತ, ವಿವರಿಸಲಾಗದ ಅಥವಾ ಗ್ರಹಿಸಲಾಗದ ಎಂದು ವಿವರಿಸಬಹುದು. ಅವುಗಳನ್ನು ನಾವು ಗ್ರಹಿಸುವುದು ಕಷ್ಟವಾದರೂ ಕೂಡ ದೇವರ ರಹಸ್ಯಗಳನ್ನು ಸತ್ಯವೇದ ಉಲ್ಲೇಖಿಸುತ್ತದೆ. ಅದ್ದರಿಂದಲೆ ಅವು ರಹಸ್ಯವಾಗಿವೆ. ನಮ್ಮ ಹತ್ತಿರದ ಕಣ್ಣು ದೃಷ್ಟಿಯಿಂದ ಆಕಾಶದಲ್ಲಿರುವ ದೂರದ ವಸ್ತುಗಳನ್ನು ನೋಡಲು ಪ್ರಯತ್ನ ಪಡುವಂತೆ ಇರುತ್ತದೆ. ದೂರದ ವಸ್ತುಗಳನ್ನು ದೇವರು ನಮಗೆ ತೋರಿಸದೆ ಇದ್ದರೆ ಅವುಗಳನ್ನು ನಾವು ನೋಡಲು ಸಾಧ್ಯವಿಲ್ಲ.

ಧರ್ಮೋಪದೇಶಕಾಂಡ 29:29 ನ್ನು ಓದಿರಿ ಇದರಲ್ಲಿ ನಮಗೆ ಏನು ತಿಳಿಸಲಾಗಿದೆ?

ನಮಗೆ ಗ್ರಹಿಸಲು ಸಾಧ್ಯವಾಗದ ದೇವರ ರಹಸ್ಯಗಳ ಪಾರುಪತ್ಯಗಾರರಾಗಿದ್ದೇವೆ. ಸತ್ಯವೇದವು ನಮಗೆ ಏನು ತಿಳಿಸುತ್ತದ್ದೋ ಅಷ್ಟರ ಮಟ್ಟಿಗೆ ತಿಳಿದುಕೊಳ್ಳುವ ವಿಷಯಗಳಲ್ಲಿ ನಾವು ಪಾರುಪತ್ಯಗಾರರಾಗಿದ್ದೇವೆ. ನಮ್ಮ ಶ್ರೇಷ್ಠವಾದ ಪಾರುಪತ್ಯಗಾರಿಕೆಯೆಂದರೆ 'ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವರೆಂತಲೂ ಎಣಿಸಬೇಕು' (1 ಕೊರಿಂಥ 4:1)

ನಮಗೆ ದೇವರು ತಿಳಿಸಿರುವ ಸತ್ಯಗಳನ್ನು ನಾವು ಕಾಪಾಡುತ್ತಾ, ಬೋಧಿಸುತ್ತಾ,



ಸಂರಕ್ಷಿಸುತ್ತಾ ಮತ್ತು ಅವುಗಳನ್ನು ಆರೈಕೆ ಮಾಡುತ್ತಾ ಇರಬೇಕೆಂದು ಬಯಸುತ್ತಾನೆ. ಇದನ್ನು ನಾವು ಹೇಗೆ ನಭಾಯಿಸುತ್ತೆವೋ ಅದೇ ಮುಖ್ಯವಾದ ಪಾರುಪತ್ಯಗಾರಿಕೆಯಾಗಿದೆ. ಇದರ ಅರ್ಥವೆಂದರೆ ನಾವು 'ಸತ್ಯಾರ್ಥವನ್ನು ಶುದ್ದ ಮನಸಾಕ್ಷಿಯಿಂದ ಕೈಕೊಳ್ಳುವವರಾಗಿರಬೇಕು.' (1 ತಿಮೋಥಿ 3:9)

ಎಲ್ಲಾ ಸತ್ಯಾರ್ಥಗಳಿಗಿಂತ ಮಿಗಿಲಾದ ಸತ್ಯಾರ್ಥವೆಂದರೆ 'ನಿರೀಕ್ಷೆಯ ಪ್ರಭಾವ' ವಾಗಿರುವ ಕ್ರಿಸ್ತನನ್ನು ಅರಿಯುವುದಾಗಿದೆ. ರಕ್ಷಣಾ ಯೋಜನೆಯು ಅಲೌಕಿಕವಾದದ್ದು ಮತ್ತು ನಾವು ಸಂಪೂರ್ಣವಾಗಿ ಗ್ರಹಿಸಲಾಗದ ವಿಷಯವಾಗಿದೆ. ಇಡೀ ಸೃಷ್ಟಿಯನ್ನು ನಿರ್ಮಾಣ ಮಾಡಿದ ದೇವರು (ಯೋಹಾನ 1:1–3) ಈ ಲೋಕಕ್ಕೆ ಇಳಿದು ಬಂದು ?ಮಾನವನ ಸ್ವರೂಪವನ್ನು ಧರಿಸುವುದು? (ಎಲೆನ್ ಜಿ ವೈಟ್ ಮ್ಯಾನುಸ್ಕ್ರಿಪ್ಟ್ ರಿಲೀಸ್ ಸಂಪುಟ 6, ಪುಟ 112) ಮತ್ತು ತನ್ನನ್ನು ತಾನು ಮಾನವರ ಬದಲಿಗೆ ಪಾಪದ ಪಾಲಿಗೆ ಬಲಿದಾನವಾಗಿ ಅರ್ಪಿಸಿಕೊಳ್ಳುವುದು ಸೃಷ್ಟಿಯಾಗಿರುವ ನಮಗೆ ಎಂದಿಗೂ ಅರ್ಥವಾಗದ ವಿಷಯವಾಗಿ ಉಳಿಯುವುದು. ಪರಲೋಕದ ದೇವದೂತರು ಕೂಡ ಕ್ರಿಸ್ತನು ಯಾಕೆ ಈ ಲೋಕಕ್ಕೆ ಬಂದನು ಎಂಬುದಾಗಿ ಅಧ್ಯಯನ ಮಾಡುತ್ತಿದ್ದಾರೆ (1 ಪೇತ್ರನು 1:12). ಅದರೂ ಕೂಡ ಅವರಿಗೆ ಏನು ತಿಳಿದಿದೆಯೋ ಅದರಿಂದ ನಾವು ದೇವರ ಮಹಿಮೆ ಮತ್ತು ಒಳ್ಳೆತನಕ್ಕಾಗಿ ಆತನನ್ನು ಸ್ತುತಿಸಬಹುದಾಗಿದೆ. (ಪ್ರಕಟಣೆ 5:13).

ಸುವಾರ್ತೆಯ ವಿಷಯವಾಗಿ ನೀವು ಪಾರುಪತ್ಯಗಾರಗಾಗಿದ್ದಿರಿ. ಇದರಿಂದ ನಿಮಗೆ ಸ್ವಾಭಾವಿಕವಾಗಿ ವಹಿಸಲಾಗಿರುವ ಯಾವ ಜವಾಬ್ದಾರಿಯ ಕುರಿತಾಗಿ ಹೇಳುತ್ತದೆ.?

**ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ**

**ಜನವರಿ 27–ಫೆಬ್ರವರಿ 2**

**ಬುಧವಾರ ಜನವರಿ 31**

## ಆತ್ಮೀಯ ಸತ್ಯಗಳ ಪಾರುಪತ್ಯಗಾರರು

ನಾವು ಪಾರುಪತ್ಯಗಾರಿಕೆಯ ವಿಚಾರವಾಗಿ ಆಲೋಚಿಸುವಾಗ, ನಾವು ಪ್ರತ್ಯಕ್ಷವಾದ ವಸ್ತುಗಳ ಕುರಿತಾಗಿ ಆಲೋಚಿಸುತ್ತೇವೆ ಅದು ಸರಿಯಾದದ್ದೇ. ಆದರೆ ನಾವು ನೋಡಿದ ಹಾಗೆ ಪಾರುಪತ್ಯಗಾರಿಕೆಯು ಅದಕ್ಕಿಂತ ಮಿಗಿಲಾದದ್ದು. ಕಣ್ಣಿಗೆ ಕಾಣುವ ವಸ್ತುಗಳು,

ಕಣ್ಣಿಗೆ ಕಾಣದ ಅಧ್ಯಾತ್ಮಿಕ ವರಗಳು ದೇವರಿಂದ ಬರುತ್ತವೆ. ಈ ಕಣ್ಣಿಗೆ ಕಾಣದವುಗಳು ದೇವರು ನಮಗೆ ನೀಡುವ ಅಧ್ಯಾತ್ಮಿಕ ಅಸ್ತಿಗಳಾಗಿವೆ.(1 ಪೇತ್ರ 4:10) ಇದರಿಂದ ಕ್ರಿಸ್ತನಲ್ಲಿ ನಾವು ಕ್ರೈಸ್ತಿಯ ಗುಣಗಳನ್ನು ಬೆಳೆಸಿಕೊಂಡು ಆತನ ಮಕ್ಕಳಾಗಿ ಬೆಳೆಯಲು ನಮಗೆ ನೀಡಲಾಗಿದೆ. ಆದ್ದರಿಂದ ಕಣ್ಣಿಗೆ ಕಾಣದಿರುವ ವರಗಳನ್ನು ಕಣ್ಣಿಗೆ ಕಾಣುವ ವಾರಗಳ ಹಾಗೆ ಎಚ್ಚರಿಕೆಯಿಂದ ಕಾಪಾಡಬೇಕಾಗಿದೆ, ಯಾಕೆಂದರೆ ಅವು ಕೂಡ ಬಹಳ ಬೆಲೆಯುಳ್ಳವುಗಳಾಗಿವೆ.

ಎಫೆಸ 6:13–17 ದೇವರಿಂದ ಯಾವ ವರಗಳನ್ನು ನಾವು ಪಡೆದಿದ್ದೇವೆ, ಅವುಗಳ ವಿಷಯದಲ್ಲಿ ನಾವು ಯಾವ ರೀತಿಯ ಪಾರುಪತ್ಯಗಾರರಾಗಿರಬೇಕು? ಈ ವಿಷಯಗಳಲ್ಲಿ ನಾವು ಯಾಕೆ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು?

“ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ.” (ರೋಮ 6:23). ಕ್ರಿಸ್ತನಲ್ಲಿ ನಮಗೆ ಸಿಗುವ ವಿಮೋಚನೆಗೆ ಈ ಲೋಕವು ಕೊಡುವ ಯಾವ ವಸ್ತುಗಳು ಕೂಡ ಅದಕ್ಕೆ ಸರಿಸಮಾನವಾಗುವುದಿಲ್ಲ. ವಿಮೋಚನೆ,ನಮಗೆ ದೇವರಿಂದ ಕೊಡಲ್ಪಡುವ ವರವಾಗಿದೆ. ಇದು ನಮಗೆ ಬೆಲೆಬಾಳುವ ಅಸ್ತಿಯಾಗಿದೆ. ಈ ವಿಮೋಚನೆಯನ್ನು ದೃಷ್ಟಿಯಲ್ಲಿಟ್ಟುಕೊಂಡಾಗ ಮತ್ತು ದೇವರು ನಮಗೆ ನೀಡಿರುವ ಇತರೆ ಆಶೀರ್ವಾದಗಳನ್ನು ಗಮನಿಸಿದಾಗ ನಮ್ಮ ಪಾರುಪತ್ಯಗಾರಿಕೆಯ ದೃಷ್ಟಿಕೋನವು ಬದಲಾಗುತ್ತದೆ.

‘ಕಲ್ವಾರಿಯ ನಿಜವಾದ ಬೆಳಕಿನಲ್ಲಿ ಮಾತ್ರ ಪ್ರಕೃತಿಯ ಪಾಠವನ್ನು ಸರಿಯಾಗಿ ಕಲಿಯಲು ಸಾಧ್ಯ. ಬೆತ್ಲೆಹೆಮ್ ಮತ್ತು ಕಲ್ವಾರಿ ಶಿಲುಬೆಯಲ್ಲಿ ಒಳ್ಳೆಯದು ಹೇಗೆ ಕೆಟ್ಟದನ್ನು ಜಯಿಸುತ್ತದೆ, ಮತ್ತು ನಾವು ಪಡೆಯುವ ಪ್ರತಿಯೊಂದು ಬಹುಮಾನವೂ ಕೂಡ ವಿಮೋಚನೆಯ ವರವಾಗಿದೆ ಎಂದು ಗ್ರಹಿಸಬಹುದು’ **ಎಲೆನ್ ಜಿ ವೈಟ್ ಎಜುಕೇಶನ್ ಪುಟ 101**.

ಕ್ರಿಸ್ತನು ಅಂತಿಮವಾದ ಬೆಲೆಯನ್ನು ಸಲ್ಲಿಸಿದ ಕಾರಣಕ್ಕಾಗಿ ಮಾತ್ರ ವಿಮೋಚನೆಯು ನಮಗೆ ದೊರೆತಿದೆ. ಪೌಲನು ಇದನ್ನು ಹೀಗೆ ಹೇಳುತ್ತಾನೆ ‘ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು.’ (ಎಫೆಸ 1:7). **‘ನಮಗೆ ದೊರೆಯಿತು’** ಎಂಬ ಪದದ



ಅರ್ಥವನ್ನು ನೋಡುವಾಗ ನಮಗೆ ‘ವಿಮೋಚನೆಯು’ ದೊರೆಯಿತು. ಅದು ನಮ್ಮದು, ಆದರೆ ಅದು ದೇವರು ನಮಗೆ ನೀಡಿದ ಕಾರಣಕ್ಕಾಗಿ ಮಾತ್ರ ಅದು ನಮ್ಮದಾಗಿದೆ. ಆದ್ದರಿಂದ ‘ದೇವರು ದಯಪಾಲಿಸುವ ಆಯುಧಗಳನ್ನು ಧರಿಸುವುದು’ (ಎಫೆಸ 6:11) ಎಷ್ಟು ಮುಖ್ಯವಾಗಿದೆ. ಇದರಿಂದ ಸೈತಾನನು ಬಂದು ಅದನ್ನು ಅಪಹರಿಸಿಕೊಂಡು ಹೋಗದಂತೆ ನಾವು ತಡೆಯಬಹುದು. ನಾವು ಆತನನ್ನು ನಮ್ಮ ಜೀವನದ ಒಳಗೆ ಬರಮಾಡಿಕೊಂಡರೆ ಅದು ನಾವು ದೇವರ ವಾಕ್ಯಕ್ಕೆ ವಿಧೇಯತೆಯನ್ನು ತೋರಿಸಿದೆ ಹೋದರೆ (ಎಫೆಸ 6:17) ಅವನು ನಮ್ಮ ಜೀವನದಲ್ಲಿ ಪ್ರವೇಶಿಸಿ ನಮ್ಮ ವಿಮೋಚನೆಯನ್ನು ಅಪಹರಿಸುವನು. ನಮ್ಮ ಶ್ರೇಷ್ಠವಾದ ರಕ್ಷಣೆಯೆಂದರೆ ನಮಗೆ ನೀಡಲಾಗಿರುವ ಬೆಳಕಿನಲ್ಲಿ ನಂಬಿಕೆಯಿಂದ ವಿಧೇಯತೆ ತೋರಿಸುವುದಾಗಿದೆ.

ಎಫೆಸ 6:13–17 ದೇವರು ಕೊಡುವ ರಕ್ಷಣಾ ಕವಚವನ್ನು ಹೇಗೆ ಧರಿಸುವುದು, ಮತ್ತು ರಕ್ಷಣಾ ಕವಚದಲ್ಲಿ ನೀಡಲಾಗಿರುವ ಎಲ್ಲಾ ವಿಷಯಗಳಲ್ಲಿ ನಾವು ಹೇಗೆ ಪಾರುಪತ್ಯಗಾರರಾಗಿರಬೇಕು?

**ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ ಜನವರಿ 27–ಫೆಬ್ರವರಿ 2**

**ಗುರುವಾರ ಫೆಬ್ರವರಿ 1**

## ಪಾರುಪತ್ಯಗಾರರಾಗಿ ನಮ್ಮ ಜವಾಬ್ದಾರಿ

ಬುದ್ದಿವಂತ ಪಾರುಪತ್ಯಗಾರರು ವ್ಯಯಕ್ತಿಕ ಜವಾಬ್ದಾರಿಗಳನ್ನು ನೈತಿಕ ನಿಯಮಗಳ ಅಡಿಯಲ್ಲಿ ನಡೆಸಲು ಅವರು ತೋರಿಸುವ ಅಂಗಿಕಾರದ ಮೇಲೆ ಗುರುತಿಸಲ್ಪಡುತ್ತಾರೆ. ವ್ಯಯಕ್ತಿಕ ಜವಾಬ್ದಾರಿಗಳನ್ನು ಅಂಗಿಕರಿಸುವುದು ನಾವು ಮಾಡುವ ಆಯ್ಕೆಗಳ ಮತ್ತು ನಮ್ಮ ಕ್ರಿಯೆಗಳ ಮೇಲೆ ಅವಲಂಬಿತವಾಗಿರುತ್ತದೆ. ಅದು ಕಾರಣ ಮತ್ತು ಪರಿಣಾಮಗಳ ಮೇಲೆ ಆಧಾರವಾಗಿರುತ್ತದೆ. ಒಬ್ಬ ಪಾರುಪತ್ಯಗಾರನನ್ನು ಗುರುತಿಸುವಾಗ ವ್ಯಯಕ್ತಿಕ ಜವಾಬ್ದಾರಿಯನ್ನು ಅಂಗಿಕರಿಸುವ ಗುಣವನ್ನು ಕಡೆಗಣಿಸುವಂತಿಲ್ಲ, ಯಾಕೆಂದರೆ ಅದು ಪಾರುಪತ್ಯಗಾರನ ಬಹಳ ಮುಖ್ಯವಾದ ಗುಣ ಅಂದರೆ ತನ್ನ ಯಜಮಾನನ ಏಳಿಗೆಯನ್ನು ತನ್ನ ಹೃದಯದಲ್ಲಿ ಅಡಗಿಸಿಕೊಂಡಿರುತ್ತಾನೆ. ಆದ್ದರಿಂದ ಅಂತಹ ಇಚ್ಛೆಯು ಒಬ್ಬ ಪಾರುಪತ್ಯಗಾರನು ತನ್ನ ದೇವರೊಂದಿಗೆ ಹೊಂದಿರುವ ಸಂಬಂಧವನ್ನು ತೋರಿಸುತ್ತದೆ.

‘ದೇವರು ಮನುಷ್ಯರನ್ನು ತನ್ನ ಜೊತೆ ನೇರವಾದ ಸಂಪರ್ಕವನ್ನು ಹೊಂದಲು ಬಯಸುತ್ತಾನೆ. ಮನುಷ್ಯರ ಜೊತೆಯಲ್ಲಿ ಆತನು ನಡೆಸುವ ಎಲ್ಲಾ ವ್ಯವಹಾರಗಳಲ್ಲಿ ಆತನು ವ್ಯಯಕ್ತಿಕ ಜವಾಬ್ದಾರಿಯನ್ನು ಬಯಸುತ್ತಾನೆ. ಆತನು ವ್ಯಯಕ್ತಿಕ ಅವಲಂಬನೆ ಮತ್ತು ವ್ಯಯಕ್ತಿಕ ಮಾರ್ಗದರ್ಶನದ ಅವಶ್ಯಕತೆಯನ್ನು ತೋರಿಸುತ್ತಾನೆ. ಮನುಷ್ಯರಿಗೆ ಆತನು ನೀಡುವ ವರಗಳು ಅವರನ್ನು ವ್ಯಕ್ತಿಗಳಾಗಿ ಗುರುತಿಸುತ್ತವೆ. ಪ್ರತಿಯೊಬ್ಬ ಮನುಷ್ಯನು ಕೂಡ ತನಗೆ ನೀಡಲಾಗಿರುವ ವಾರಗಳಲ್ಲಿ ಪವಿತ್ರವಾದ ನಂಬಿಕೆಗೆ ಪಾತ್ರನಾಗಿರಬೇಕು. ತನಗೆ ಕೊಡಲಾಗಿರುವ ವರಗಳನ್ನು ನೀಡಿದಾತನ ಚಿತ್ತಕ್ಕೆ ಅನುಗುಣವಾಗಿ ಉಪಯೋಗಿಸಬೇಕು: ಮತ್ತು ದೇವರಿಗೆ ತನ್ನ ಪಾರುಪತ್ಯಗಾರಿಕೆಯ ಕುರಿತಾಗಿ ಲೆಕ್ಕ ವನ್ನು ಒಪ್ಪಿಸಬೇಕಾಗಿದೆ.’ **ಎಲೆನ್ ಜಿ ವೈಟ್ ಟೆಸ್ಟಿಮೊನಸ್ ಫಾರ್ ದಿ ಚರ್ಚ್ ಸಂಪುಟ 1, ಪುಟ 176**.

ನಾವು ಪಾರುಪತ್ಯಗಾರರಾದಾಗ ನಮ್ಮ ಜವಾಬ್ದಾರಿಯನ್ನು ಮತ್ತೊಬ್ಬ ವ್ಯಕ್ತಿಗೆ ಅಥವಾ ಸಂಸ್ಥೆಗೆ ವರ್ಗಾಯಿಸುವುದಿಲ್ಲ. ನಮ್ಮ ವ್ಯಯಕ್ತಿಕ ಜವಾಬ್ದಾರಿ ದೇವರಿಗೆ ಮತ್ತು ನಮ್ಮ ಸುತ್ತಲೂ ಇರುವ ವ್ಯಕ್ತಿಗಳಿಗೆ ನಾವು ಲೆಕ್ಕ ನೀಡಬೇಕಾಗಿದೆ (ಆದಿಕಾಂಡ 39:9; ಮತ್ತು ದಾನಿಯೇಲ 3:16 ನ್ನು ನೋಡಿರಿ). ನಮ್ಮ ಸಾಮರ್ಥ್ಯಕ್ಕೆ ತಕ್ಕ ಹಾಗೆ ನಾವು ನಮ್ಮ ಕೆಲಸಗಳನ್ನು ನಿರ್ವಹಿಸುತ್ತೇವೆ. ದೇವರ ದೃಷ್ಟಿಯಲ್ಲಿ ಯಶಸ್ಸು ಎನ್ನುವುದು ನಮ್ಮ ಬುದ್ದಿವಂತಿಕೆ ಮತ್ತು ತಲಾಂತುಗಳಿಗಿಂತ ಮಿಗಿಲಾಗಿ ನಮ್ಮ ನಂಬಿಕೆ ಮತ್ತು ಶುದ್ಧತೆಯ ಮೇಲೆ ಆಧಾರವಾಗಿರುತ್ತದೆ.

2 ಕೊರಿಂಥ 5:10 ನ್ನು ಓದಿರಿ. ಬುದ್ದಿವಂತ ಪಾರುಪತ್ಯಗಾರನ ಹಿನ್ನಲೆಯಲ್ಲಿ ಈ ವಚನಗಳನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬಹುದು?

ತತ್ವ ಜ್ಞಾನಿಗಳು ಮತ್ತು ಚಿಂತಕರು ಸ್ವ ಇಚ್ಛೆ ಕುರಿತಾಗಿ ಬಹಳ ಚರ್ಚೆಯನ್ನು ಮಾಡಿದ್ದಾರೆ. ಆದರೆ ಸತ್ಯವೇದವು ಬಹಳ ಸ್ಪಷ್ಟವಾಗಿದೆ. ಮನುಷ್ಯರಾಗಿ ನಮಗೆ ಸ್ವ ಇಚ್ಛೆ ಮತ್ತು ಆಯ್ಕೆಯ ಸ್ವಾತಂತ್ರ್ಯವಿದೆ. ಇವು ಇಲ್ಲದೆ ಹೋದರೆ ನಮ್ಮ ಕ್ರಿಯೆಗಳ ಅನುಸಾರವಾಗಿ ನಮ್ಮನ್ನು ನ್ಯಾಯತೀರ್ಪಿಗೆ ಒಳಪಡಿಸುವುದು ಯಾವುದೇ ರೀತಿಯ ಅರ್ಥವನ್ನು ನೀಡುವುದಿಲ್ಲ. ಆದ್ದರಿಂದ ನಮಗೆ ವ್ಯಯಕ್ತಿಕವಾದ ಜವಾಬ್ದಾರಿಯಿದೆ, ದೇವರ ಕೃಪೆಯಿಂದ ನಾವು ಮಾಡುವ ಎಲ್ಲಾ ಕ್ರಿಯೆಗಳಲ್ಲಿ ಸರಿಯಾದ ತಿರ್ಮಾನಗಳನ್ನು



ಮತ್ತು ಸರಿಯಾದ ಆಯ್ಕೆಗಳನ್ನು ಮಾಡಲು ಇದರಲ್ಲಿ ನಮ್ಮ ಯಜಮಾನನಗಾಗಿ ನಾವು ನಂಬಿಗಸ್ತ ಪಾರುಪತ್ಯಗಾರರಾಗಿ ಉಳಿಯುವುದು ಸೇರಿದೆ.

**ಪಾಠ 5 ಏದೇನಿನ ನಂತರದ ಪಾರುಪತ್ಯಗಾರಿಕೆ ಜನವರಿ 27–ಫೆಬ್ರವರಿ 2**

**ಶುಕ್ರವಾರ ಫೆಬ್ರವರಿ 2**

## ಹೆಚ್ಚಿನ ಚಿಂತನೆ:

‘ಪಾರುಪತ್ಯಗಾರ’ ಎಂಬ ಪದವನ್ನು ಹಳೆಯ ಒಡಂಬಡಿಕೆಯಲ್ಲಿ ಭಾಷಾಂತರ ಮಾಡುವಾಗ ಅದನ್ನು ಒಂದು ಪದದಿಂದ ಅದನ್ನು ತೆಗೆದುಕೊಂಡಿಲ್ಲ ಬದಲಿಗೆ ಅದನ್ನು ‘ಆಶರ್ ಅಲ ಬಯ್ತ್’ ಎಂಬ ಒಂದು ವಾಕ್ಯದಿಂದ ಆಯ್ಕೆಮಾಡಲಾಗಿದೆ. ‘ಒಂದು ಮನೆಯ ಮೇಲ್ವಿಚಾರಕನು’ ಉದಾಹರಣೆಗೆ ಆದಿಕಾಂಡ 43 :19 ನ್ನು ಹೀಗೆ ಭಾಷಾಂತರ ಮಾಡಬಹುದು, ‘ತಮ್ಮ ತಮ್ಮೊಳಗೆ ಮಾತಾನಾಡಿಕೊಂಡು ಮನೆಬಾಗಿಲಲ್ಲಿದ್ದ ಮನೆವಾರ್ತೆಯವನ ಬಳಿಗೆ ಹೋಗಿ’ ಒಬ್ಬನು ಮನೆಯಲ್ಲಿರುವ ಎಲ್ಲರನ್ನೂ ಕೂಡ ಮನೆಯೆಂದು ಎಣಿಸುವುದಾದರೆ ಒಬ್ಬನಿಗೆ ಸ್ವಂತ ಮನೆಯು ಎಷ್ಟು ಪ್ರಾಮುಖ್ಯವಾಗುತ್ತದೆ.? ಆದ್ದರಿಂದ ಪಾರುಪತ್ಯಗಾರನೆಂದರೆ ಅದಕ್ಕಿಂತ ಮಿಗಿಲು ತನಗೆ ನೀಡಲಾಗಿರುವ ಎಲ್ಲವೂ ತನ್ನ ವಶದಲ್ಲಿ ಇದ್ದರೂ ಕೂಡ ಅವನು ಅದರ ಯಜಮಾನನಲ್ಲ. ಅನೇಕ ವಿಧಾನಗಳಲ್ಲಿ ಅವನ ಸ್ವಂತ ವಸ್ತುಗಳ ಮೇಲೆ ಅವನಗಿರುವ ಜವಾಬ್ದಾರಿಗಿಂತ ಇತರರ ವಸ್ತುಗಳ ಮೇಲಿನ ಜವಾಬ್ದಾರಿಯು ಅವನ್ನನ್ನು ಉನ್ನತ ಸ್ಥಾನದಲ್ಲಿ ಇಡುತ್ತದೆ.

ಈ ಆಲೋಚನೆಯನ್ನು ಹೊಸ ಒಡಂಬಡಿಕೆಯು ಮುಂದುವರೆಸುತ್ತದೆ. ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಯ ಆಲೋಚನೆಯನ್ನು ತೆಗೆದುಕೊಂಡು ಅದನ್ನು ಮೊದಲನೇಯ ಶತಮಾನದ ಆಲೋಚನೆ, ವಿಧಾನಗಳು ಮತ್ತು ಪದಗಳ ಜೊತೆಗೆ ಸೇರಿಸಿಕೊಳ್ಳುತ್ತದೆ, ಇದರಿಂದ ಪಾರುಪತ್ಯಗಾರಿಕೆಯ ಕುರಿತಾಗಿ ಸತ್ಯವೇದದ ಬೋಧನೆಯನ್ನು ಇನ್ನೂ ವಿಸ್ತಾರ ಹಾಗೂ ಶ್ರೀಮಂತಗೊಳಿಸುತ್ತದೆ. ಸಾಮಾನ್ಯವಾಗಿ ಪಾರುಪತ್ಯಗಾರನಿಗೆ ಗ್ರೀಕ್ ಭಾಷೆಯಲ್ಲಿ ಉಪಯೋಗಿಸಿರುವ ಎರಡೂ ಪದಗಳು “ಒಇಕೊಸ್” ಮತ್ತು “ಒಇಕೊಅ.”“ಒಇಕೊಸ್” ಎಂದರೆ ಮನೆ ಕಾಯುವವನು,

ಅಥವಾ ಮನೆ ವಾರ್ತೆಯವನು ಅಥವಾ ನಿರ್ವಾಹಕನು. ಒಇಕೊನೊಮೊಸ್ ಎಂದರೆ ಸಾರಾಂಶದ ನಾಮಪದ ಮನೆಯ ನಿರ್ವಹಣೆ, ಇದರ ಅರ್ಥವೂ ಬಹಳ ವಿಸ್ತಾರವಾಗಿದೆ. **ಹ್ಯಾಂಡ್ಬುಕ್ ಆಫ್ ಸೇವೆಂತ್–ಡೇ ಅಡ್ವೆಂಟಿಸ್ಟ್ ಥಿಯಾಲಜಿ (ಹೆಗರ್ಸ್ ಟೌನ್, ಎಂಡಿ: ರಿವ್ಯೂ ಅಂಡ್ ಹೆರಾಲ್ಡ್ ಪುಬ್ಲಿಶಿಂಗ್ ಅಸೋಸಿಯೇಷನ್, 2000), ಪುಟ 653**.

ಚರ್ಚಿಸಬೇಕಾದ ಪ್ರಶ್ನೆಗಳು:

1. ಹಣ್ಣನ್ನು ತಿಂದದ್ದಾಕ್ಕಾಗಿ ಜವಾಬ್ದಾರಿಯನ್ನು ತೆಗೆದುಕೊಳ್ಳುವ ಬದಲು ನೀನು ಏನು ಮಾಡಿದೆ? ಎಂದು ದೇವರು ಅದಾಮನನ್ನು ಕೇಳಿದಾಗ ಆದಾಮನು ಕೊಟ್ಟ ಉತ್ತರವೇನು? ಆದಿಕಾಂಡ 3:12 ನಮ್ಮ ತಪ್ಪನ್ನು ಇತರರ ಮೇಲೆ ಹೊರಿಸುವುದು ಅನಾದಿಕಾಲದಿಂದಲೂ ಕೂಡ ಪಾಪದ ಒಂದು ಸ್ವರೂಪವಾಗಿ ಹೇಗೆ ಪರಿಣಮಿಸಿದೆ. ಅದಾಮನ ಉತ್ತರವೂ ತನ್ನ ವ್ಯಯಕ್ತಿಕ ಜವಾಬ್ದಾರಿಯನ್ನು ತಾನು ಹೊತ್ತುಕೊಳ್ಳಬೇಕು ಎಂಬ ಸತ್ಯವನ್ನು ನಮಗೆ ಹೇಗೆ ತೋರಿಸುತ್ತದೆ.? ಇದರಿಂದ ಇತರರ ಮೇಲೆ ಅಪವಾದ ಹೊರಿಸುವ ಸಾಮಾನ್ಯವಾದ ಪಾಪದ ಲಕ್ಷಣದಿಂದ ನಾವು ಹೇಗೆ ದೂರವಾಗಿರಬಹುದು?

2. ಕಣ್ಣಿಗೆ ಕಾಣುವ ವಸ್ತುಗಳ ಬದಲಿಗೆ ಅಧ್ಯಾತ್ಮಿಕ ವಸ್ತುಗಳ ವಿಷಯದಲ್ಲಿ ಪಾರುಪತ್ಯಗಾರರಾಗಿರುವುದನ್ನು ಕುರಿತು ನಿಮ್ಮ ತರಗತಿಯಲ್ಲಿ ಚರ್ಚಿಸಿರಿ.? ಈ ವಿಷಯಗಳನ್ನು ನಾವು ಹೇಗೆ ನಿಭಾಯಿಸಬಹುದು.?

3. ಪ್ರಕಟಣೆ 14:6–12 ರಲ್ಲಿರುವ ಮೂರು ದೂತರ ಸಂದೇಶದ ಕುರಿತಾಗಿ ಆಲೋಚಿಸಿರಿ. ಪಾರುಪತ್ಯಗಾರರಾಗಿ ನಮಗೆ ಯಾವ ಜವಾಬ್ದಾರಿಯನ್ನು ಅಲ್ಲಿ ನೀಡಲಾಗಿದೆ.

4. ನಮಗೆ ಸಂಪೂರ್ಣವಾಗಿ ಅರ್ಥವಾಗದಿರುವ ಅಧ್ಯಾತ್ಮಿಕ ವಿಷಯಗಳ ಕುರಿತಾಗಿ ಒಳ್ಳೆಯ ಪಾರುಪತ್ಯಗಾರರಾಗಿ ಇರುವುದು ಎಷ್ಟು ಮುಖ್ಯವಾದದ್ದು?